**ಸಾಕ್ಷಿಯನ್ನು ದಿಃ *30/07/2024* ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆ ಃ ಪ್ರತಿವಾದಿಯ ಪರ ವಕೀಲರಿಂದ.**

ನಾನು ನ್ಯಾಯಾಲಯಕ್ಕೆ ಈ ಕೆಳಗಿನ ದಾಖಲೆಗಳನ್ನು ಹಾಜರುಪಡಿಸುತ್ತಿದ್ದೇನೆ.

| ಅ.ನಂ. | ದಾಖಲೆಗಳು |
|---|---|
| ನಿ.ಡಿ.21 | ಐಸಿಐಸಿಐ ಬ್ಯಾಂಕನ ಜುಲೈ, ಆಗಸ್ಟ, ಸೆಪ್ಟೆಂಬರ 2011, ಫೆಬ್ರುವರಿ ರಿಂದ ಮೇ 2012 ಬ್ಯಾಂಕ ದಾಖಲೆಗಳು (ಒಟ್ಟಾಗಿ) |
| ನಿ.ಡಿ.22 | ಅಸಲು ದಾವೆ ನಂ.168/2006 ರ ಎರಡು ಪುಟಗಳ ರೋಜನಾಮೆಯ ದೃಢಿಕೃತ ನಕಲು |
| ನಿ.ಡಿ.23 | ಸದರಿ ದಾವೆಯಲ್ಲಿ ವಾದಿ ಪರ ವಕೀಲರು ದಾವೆ ಕಿತ್ತು ಹಾಕಲು ಸಲ್ಲಿಸಿರುವ ಜ್ಞಾಪನ ಪತ್ರದ ದೃಢಿಕೃತ ನಕಲು |

ಆದುದರಿಂದ ಪ್ರಮಾಣಪತ್ರ ಮತ್ತು ದಾಖಲೆಗಳನ್ನು ಪರಿಶೀಲಿಸಿ ದಾವೆಯನ್ನು ವಜಾಗೊಳಿಸಲು ವಿನಂತಿ.

***ಪಾಟೀ ಸವಾಲು ಃ ವಾದಿ ಪರ ವಕೀಲರಿಂದ.***

ಧಾರವಾಡದ ಸಾರಸ್ವತಪೂರದ ಮನೆಯಲ್ಲಿರುತ್ತೇನೆ ಎಂದರೆ ನಿಜ. ನಾನು ಮತ್ತು ಡಿ.ಡಬ್ಲೂ.1 ಅಮಿತ ಇವರು ಜಗದೀಶ ರೇಗೆ ಇವರ ಮಕ್ಕಳು. ನಮಗೆ ರೀಗಲ್ ಸರ್ಕಲ ಹತ್ತಿರ ಒಂದು ದ್ವಿಚಕ್ರ ವಾಹನ ದುರಸ್ತಿ ಮಾಡುವ ಗ್ಯಾರೇಜ ಇತ್ತು ಎಂದರೆ ನಿಜ. ನನ್ನ ತಂದೆ ಜೀವಂತವಿದ್ದಾಗ ರೇಗೆ ಆಟೋ ಸರ್ವೀಸ ಎನ್ನುವ ಗ್ಯಾರೇಜ ನೋಡಿಕೊಳ್ಳುತ್ತಿದ್ದರು. ಅವರೊಂದಿಗೆ ನನ್ನ ಚಿಕ್ಕಪ್ಪ ಶಾಂತಾರಾಮ ಮತ್ತು ನನ್ನ ದೊಡ್ಡಪ್ಪನ ಮಕ್ಕಳಾದ ಅಜೇಯ ಮತ್ತು ಸಂಜಯ ಇವರೆಲ್ಲರೂ ಕೂಡಿ ಗ್ಯಾರೇಜ ನೋಡಿಕೊಳ್ಳುತ್ತಿದ್ದರು. ಈ ನಾಲ್ಕು ಜನ ಪೈಕಿ ಎಲ್ಲರೂ ಮಾಧವರಾವ ಇವರ ವಾರಸುದಾರರು. ಸದರಿ ರೇಗೆ ಆಟೋ ಸರ್ವೀಸ ಎನ್ನುವ ಗ್ಯಾರೇಜ ರಜಿಸ್ಟರ ಫರ್ಮ ಅಥವಾ ಪಾಲುದಾರಿಕೆ ಫರ್ಮ ಇತ್ತೊ ನನಗೆ ಗೊತ್ತಿಲ್ಲ. ಈ ಗ್ಯಾರೇಜನ ಕುರಿತು ಬ್ಯಾಂಕನಲ್ಲಿ ಪ್ರತ್ಯೇಕ ಖಾತೆ ಇತ್ತೋ ಇಲ್ಲವೊ ನನಗೆ ಗೊತ್ತಿಲ್ಲ. ಸದರಿ ಗ್ಯಾರೇಜನಿಂದ ಬರುವ ಆದಾಯವನ್ನು ಯಾವ ಬ್ಯಾಂಕನಲ್ಲಿ ಜಮೆ ಮಾಡುತ್ತಿದ್ದರು ಎಂದು ನನಗೆ ಗೊತ್ತಿಲ್ಲ. ಸದರಿ ಗ್ಯಾರೇಜನ್ನು ಶಂಕರರಾವ ಮತ್ತು ಮಾಧವರಾವ ಇವರ ಮಕ್ಕಳು ಕೂಡಿ ನಡೆಸುತ್ತಿದ್ದರು ಎಂದರೆ ಸುಳ್ಳು. ಸದರಿ ಗ್ಯಾರೇಜನಿಂದ ಬಂದಿರುವ ಆದಾಯವನ್ನು ಕೆನರಾ ಬ್ಯಾಂಕ ಮುಖ್ಯ ಕಚೇರಿಯಲಿಲ ಜಮೆ ಮಾಡುತಿತದ್ದರು ಎಂದರೆ ನನಗೆ ಗೊತ್ತಿಲ್ಲ. ಇವುಗಳನ್ನು ಎಲ್ಲವೂ ಜಗದೀಶ ರೇಗೆ ನೋಡಿಕೊಳ್ಳುತ್ತಿದ್ದರು ಎಂದರೆ ಸುಳ್ಳು. ನನಗೆ ಗೊತ್ತಿರುವ ಪ್ರಕಾರ ಸದರಿ ಗ್ಯಾರೇಜನ

ಆಗುಹೋಗುಗಳನ್ನು ನನ್ನ ತಂದೆ, ನನ್ನ ಚಿಕ್ಕಪ್ಪನ ಮತ್ತು ದೊಡಪ್ಪನ ಮಕ್ಕಳು ಎಲ್ಲರೂ ಕೂಡಿಯೇ ನೋಡಿಕೊಳ್ಳುತ್ತಿದ್ದರು. ಈ ರೀತಿ ಇವರೆಲ್ಲರೂ ಸದರಿ ಗ್ಯಾರೇಜನ್ನು ನೋಡಿಕೊಳ್ಳುತ್ತಿರುವ ಬಗ್ಗೆ ಯಾವ ದಾಖಲೆ ಇಲ್ಲ.

ಜಗದೀಶ ಇವರಿಗೆ ಧಾರವಾಡದಲ್ಲಿ ಯಾವ ಯಾವ ಬ್ಯಾಂಕನಲ್ಲಿ ಎಷ್ಟು ಖಾತೆಗಳು ಇದ್ದವು ಎನ್ನುವ ವಿಷಯ ಸಂಗತಿ ನನಗೆ ಗೊತ್ತಿಲ್ಲ. ಸದರಿಯವರು ಆದಾಯ ತೆರಿಗೆ ಪಾವತಿದಾರರು ಎಂದು ಸಹ ನನಗೆ ಗೊತ್ತಿಲ್ಲ. ನಾನು ಮತ್ತು ನನ್ನ ಸಹೋದರ ಅಮೀತ ಇಬ್ಬರೂ ಆದಾಯ ತೆರಿಗೆ ಪಾವತಿದಾರರು ಎಂದರೆ ನಿಜ. ಜಗದೀಶರವರು ಎಲ್ಲೆಲ್ಲಿ ಎಷ್ಟೆಷ್ಟು ಸಾಲ ಪಡೆದಿದ್ದರು ಎನ್ನುವ ವಿಷಯ ಸಂಗತಿ ನನಗೆ ಗೊತ್ತಿಲ್ಲ. ಸದರಿಯವರಿಗೆ ಪ್ರತಿ ತಿಂಗಳು ಎಷ್ಟು ಆದಾಯ ಬರುತ್ತಿದ್ದು ಮತ್ತು ಎಷ್ಟು ಖರ್ಚು ಇರುತ್ತಿತ್ತು ಎಂದು ಸಹ ನನಗೆ ಗೊತ್ತಿಲ್ಲ. ನಮ್ಮ ಮನೆತನದ ಉತ್ಪನ ಮತ್ತು ಖರ್ಚಿನ ಕುರಿತು ನನ್ನ ತಂದೆ ಎಲ್ಲಿಯೂ ಬರೆದಿಟ್ಟಿಲ್ಲ.

ನನ್ನ ಪ್ರಮಾಣಪತ್ರದಲ್ಲಿ ಬರೆದುಕೊಂಡ ಹಾಗೇ ನನ್ನ ತಂದೆ ಸ್ವಯಾರ್ಜಿತ ಆಸ್ತಿಗಳನ್ನು ಗಳಿಸಿದ್ದಾರೆ ಎನ್ನುವ ವಿಷಯ ಸಂಗತಿಯೂ ಯಾವ ಆಧಾರದ ಮೇರೆಗೆ ಬರೆದುಕೊಂಡಿದ್ದಿರಿ ಎಂಬ ಪ್ರಶ್ನೆಗೆ ಸಾಕ್ಷಿದಾರರು ನನ್ನ ತಂದೆಯ ಹೇಳಿಕೆ ಪ್ರಕಾರ ಸದರಿ ವಿಷಯ ಸಂಗತಿ ಗೊತ್ತಿರುತ್ತದೆ ಎಂದು ಉತ್ತರಿಸುತ್ತಾರೆ. ಈ ಕುರಿತು ಯಾವ ದಾಖಲೆಗಳು ಇಲ್ಲ ಮತ್ತು ಹಾಜರುಪಡಿಸಿಲ್ಲ ಎಂದರೆ ಸಾಕ್ಷಿದಾರರು ದಾಖಲೆಗಳು ಇವೆ ಎಂದು ಉತ್ತರಿಸುತ್ತಾರೆ. ಈ ರೀತಿ ಯಾವ ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದಿರಿ ಎಂಬ ಪ್ರಶ್ನೆಗೆ ಸಾಕ್ಷಿದಾರರು ನನಗೆ ಗೊತ್ತಾಗುವುದಿಲ್ಲ ಎಂದು ಉತ್ತರಿಸುತ್ತಾರೆ.

ನನ್ನ ಪ್ರಕಾರ ಸ್ವಯಾರ್ಜಿತ ಆಸ್ತಿಗಳು ಎಂದರೆ ಬೆಳಗಾವಿ ರಸ್ತೆಯಲ್ಲಿರುವ ಮನೆ ಮತ್ತು ಖುಲ್ಲಾ ಜಾಗೆ, ನಂಬರ ನನಗೆ ಹೇಳಲು ನೆನಪಿಲ್ಲ. ಸದರಿ ಆಸ್ತಿ ಹೊರತುಪಡಿಸಿ ಬೇರೆ ಆಸ್ತಿಗಳು ಇಲ್ಲ. ಸದರಿ ಆಸ್ತಿಯನ್ನು ಯಾವ ಇಸ್ವಿಯಲ್ಲಿ, ಎಷ್ಟು ಮೊತ್ತಕ್ಕೆ, ಯಾರು ಯಾರಿಂದ ಖರೀದಿ ಮಾಡಿದರು ಎಂಬ ಪ್ರಶ್ನೆಗೆ ಸಾಕ್ಷಿದಾರರು ದಾಖಲೆ ಇರುತ್ತದೆ, ನನಗೆ ಬಾಯಿ ಮಾತಿನಿಂದ ಹೇಳಲು ಬರುವುದಿಲ್ಲ ಎಂದು ಉತ್ತರಿಸುತ್ತಾರೆ. ಸಂಬಂಧಿತ ದಾಖಲೆ ಪ್ರತಿವಾದಿ (ಡಿ.ಡಬ್ಲೂ.1) ಪಾಟೀ ಸವಾಲಿನಲ್ಲಿ

ಗುರುತಿಸಿಕೊಂಡಿದ್ದು, ಆ ದಾಖಲೆ ಸಾಕ್ಷಿದಾರರಿಗೆ ತೋರಿಸಲಾಗಿ, ಸಾಕ್ಷಿದಾರರು ಅದನ್ನು ನೋಡಿ ಸದರಿ ಆಸ್ತಿಯನ್ನು ಶ್ರೀಮತಿ ಆಶಾ ಹೆರವಾಡಕರ ಇವರಿಂದ ದಿಃ09-06-2003 ರಂದು ಜಗದೀಶ ಮಾಧವರಾವ ರೇಗೆ ಮತ್ತು ಅರವಿಂದ ಶಂಕರರಾವ ರೇಗೆ ಇವರು ಜಂಟಿಯಾಗಿ ರೂ.12,00,000/- ಪ್ರತಿಫಲಕ್ಕೆ ಖರೀದಿ ಮಾಡಿದ್ದು ಇರುತ್ತದೆ ಎಂದು ಉತ್ತರಿಸುತ್ತಾರೆ. ಸಾಕ್ಷಿದಾರರು ಮುಂದುವೆರದು ನನ್ನ ತಂದೆ ಖರೀದಿ ಮಾಡಿರುತ್ತಾರೆ, ಆದರೆ ಅರವಿಂದ ಶಂಕರರಾವ ರೇಗೆ ಇವರ ಹೆಸರು ಅವರ ಹೆಸರಿನ ಮೇಲೆ ಸಾಲ ಪಡೆಯಲು ನಾಮಮಾತ್ರವಾಗಿ ಸೇರ್ಪಡೆ ಮಾಡಿಕೊಂಡಿರುತ್ತಾರೆ ಎಂದು ಸ್ವತಹ ಹೇಳುತ್ತಾರೆ. ಈ ರೀತಿ ಹೇಳಿಕೆಗೆ ಆಧಾರವೆಂದರೆ ನನ್ನ ತಂದೆ ಹೇಳಿರುವ ಮಾತು ಮತ್ತು ಅವರ ಹೆಸರಿನಲ್ಲಿರುವ ಸಾಲದ ಖಾತೆಯ ಕುರಿತು ದಾಖಲೆ ಹಾಜರುಪಡಿಸಿದ್ದು ಇರುತ್ತದೆ, ಆದರೆ ಅದನ್ನು ನೋಡಬೇಕು ಎಂದು ಉತ್ತರಿಸುತ್ತಾರೆ. ಸದರಿ ಆಸ್ತಿಯೂ ಇವತ್ತಿನವರೆಗೂ ಮೇಲೆ ಹೇಳಿರುವ ಇಬ್ಬರ ಹೆಸರಿನಲ್ಲಿ ದಾಖಲಾಗಿ ಇರುತ್ತದೆ ಎಂದರೆ ನಿಜ. 2003 ನೇ ಇಸ್ವಿಯಿಂದ ಇವತ್ತಿನವರೆಗೂ ಸದರಿ ಬೆಳಗಾವಿ ರಸ್ತೆಯಲ್ಲಿ ರುವ ಜಗದೀಶ ರೇಗೆ ಇವರಿಗೆ ಮಾತ್ರ ಸಂಬಂಧಿಸಿದ್ದು, ಅರವಿಂದ ಶಂಕರರಾವ ರೇಗೆ ಇವರಿಗೆ ಸಂಬಂಧಪಟ್ಟಿದ್ದು ಇರುವುದಿಲ್ಲ ಎಂದು ತೋರಿಸಲು ಯಾವ ದಾಖಲಾತಿ ಇಲ್ಲ. ಖರೀದಿ ಪತ್ರದ ಆಧಾರದ ಮೇರೆಗೆ ಇಬ್ಬರ ಹೆಸರು ಸಿಟಿಎಸ್ ರೇಕಾರ್ಡನಲ್ಲಿ ದಾಖಲಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ನನ್ನ ಪ್ರಕಾರ ಸಿಟಿಎಸ್ ರೇಕಾರ್ಡನಲ್ಲಿ ಯಾರ ಹೆಸರಿನಲ್ಲಿ ದಾಖಲೆ ಇರುತ್ತದೆ ಎಂದು ನಾನು ನೋಡಿಲ್ಲ. ಪ್ರಸ್ತುತ ದಾವೆ 2006 ನೇ ಇಸ್ವಿಯಲ್ಲಿ ಹೂಡಿದ ನಂತರ ಈ ಸದರಿ ಆಸ್ತಿ ನಮಗೆ ಮಾತ್ರ ಸಂಬಂಧಿಸಿದ್ದು ಎಂದು, ದಾಖಲೆಗಳನ್ನು ಪ್ರಶ್ನಿಸಿ ಇವತ್ತಿನವರೆಗೂ ಯಾವ ನ್ಯಾಯಾಲಯಗಳಲ್ಲಿ ಮತ್ತು ಪೋರಂಗಳಲ್ಲಿ ದಾವೆ ಅಥವಾ ಪ್ರಕರಣ ಹೂಡಿಲ್ಲ, ಪ್ರಸ್ತುತ ಪ್ರಕರಣದಲ್ಲಿ ಅದನ್ನು ಪ್ರಶ್ನಿಸಿ ಮಾಗಣೆ ಕೇಳಿರುತ್ತೇವೆ. ಈ ರೀತಿ ಘೋಷಣಾತ್ಮಕ ಮಾಗಣೆ ಅಥವಾ ಕೌಂಟರ ಕ್ಲೇಮನಲ್ಲಿ ಮಾಡಿದ್ದಿರಾ ಎಂಬ ಪ್ರಶ್ನೆಗೆ ಸಾಕ್ಷಿದಾರರು ಮಾಡಿದ್ದೇವೆ ಎಂದು ಉತ್ತರಿಸುತ್ತಾರೆ.

ಸದರಿ ಆಸ್ತಿ ಖರೀದಿ ಮಾಡಲು ನನ್ನ ತಂದೆ ಮಾತ್ರ ಪ್ರತಿಫಲ ನೀಡಿದ್ದಾರೇ ಎಂದು ತೋರಿಸಲು ಬ್ಯಾಂಕ ಖಾತೆ ಪಟ್ಟಿ ಇರುತ್ತದೆ. ಯಾವ ರೀತಿ ದಾಖಲೆ ಸದರಿ ಖರೀದಿ ದಿನಾಂಕದಂದು ಇರುತ್ತದೆ ಎಂದು ನಾನು ನೋಡಿ ಹೇಳಬೇಕು. ಸದರಿ ಖರೀದಿ ಪತ್ರದಲ್ಲಿ ನನ್ನ ಹೇಳಿಕೆಯಂತೆ ಜಗದೀಶರವರ

ಮಾತ್ರ ಸಂಬಂಧಿಸಿದ್ದು ಇರುತ್ತದೆ, ಅರವಿಂದ ರೇಗೆ ಇವರಿಗೆ ಸಂಬಂಧವಿರುವುದಿಲ್ಲ ಎಂಬ ಉಲ್ಲೇಖವಿಲ್ಲ ಎಂದರೆ ಸಾಕ್ಷಿದಾರರು ಪುನಃ ದಸ್ತಾವೇಜು ನೋಡಿ ನನಗೆ ಗೊತ್ತಾಗುತ್ತಿಲ್ಲ ಎಂದು ಉತ್ತರಿಸುತ್ತಾರೆ. ನನ್ನ ತಂದೆಯವರು ತಾನು ಮಾಡಿದಂತಹ ಉತ್ಪನವನ್ನು ಪ್ರತ್ಯೇಕವಾಗಿ ಯಾವ ಬ್ಯಾಂಕಿನಲ್ಲಿ ಇಟ್ಟಿದ್ದರು ಎಂದು ನನಗೆ ಗೊತ್ತಿಲ್ಲ. ಅವರ ಹೆಸರಿನಲ್ಲಿ ಕೆನರಾ ಬ್ಯಾಂಕನ ಮುಖ್ಯ ಶಾಖೆಯಲ್ಲಿ ಉಳಿತಾಯ ಖಾತೆ ಮತ್ತು ಸಾಲದ ಖಾತೆ ಇದೆ ಮತ್ತು ಅವುಗಳ ಪಾಸಪುಸ್ತಕಗಳು ನಮ್ಮ ಮನೆಯಲ್ಲಿವೆ ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ಐಸಿಐಸಿಐ ಬ್ಯಾಂಕನಲ್ಲಿ ಸಹ ನನ್ನ ತಂದೆಯ ಉಳಿತಾಯ ಖಾತೆ ಇತ್ತು ಎಂದರೆ ನನಗೆ ಗೊತ್ತಿಲ್ಲ. ನಾನು ಇವತ್ತಿನ ದಿನಾಂಕದಂದು ಹಾಜರುಪಡಿಸಿರುವ ಐಸಿಐಸಿಐ ಬ್ಯಾಂಕ ದಾಖಲೆ ನನ್ನ ಹೆಸರಿನಲ್ಲಿರುವ ಖಾತೆಯದು ಇರುತ್ತದೆ. ಸದರಿ ಬೆಳಗಾವಿ ರಸ್ತೆಯಲ್ಲಿರುವ ಮನೆ ರೇಗೆ ಮನೆತನದ ಒಟ್ಟು ಕುಟಂಬದ ಆಸ್ತಿ, ಜಗದೀಶರವರಿಗೆ ಮಾತ್ರ ಸಂಬಂಧಿಸಿದ್ದು ಇರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಆಸ್ತಿಯನ್ನು ಖರೀದಿ ಮಾಡುವ ಸಲುವಾಗಿ ಕೆನರಾ ಬ್ಯಾಂಕನಲ್ಲಿ ಸಾಲ ಪಡೆದಿದ್ದು, ಸದರಿ ಕೆನರಾ ಬ್ಯಾಂಕನವರು ಮೇಲೆ ಹೇಳಿದ ಇಬ್ಬರೂ ಸಾಲಗಾರರ ವಿರುದ್ಧ ಕ್ರಮ ಕೈಗೊಂಡಿದ್ದರು ಎಂದರೆ ನಿಜ. ಸದರಿ ಸಾಲವನ್ನು ನನ್ನ ತಂದೆ ತೀರಿಸಿರುತ್ತಾರೆ. ಯಾವ ಬ್ಯಾಂಕಿನಿಂದ ಸದರಿ ಮೊತ್ತವನ್ನು ಮರುಪಾವತಿ ಮಾಡಿರುತ್ತಾರೆ ಎಂದು ನಾನು ನೋಡಬೇಕಾಗುತ್ತದೆ. ಸಾಲದ ಮರುಪಾವತಿ ಎಷ್ಟು ಮೊತ್ತಕ್ಕೆ ಇತ್ತು ಎಂದು ನನಗೆ ಗೊತ್ತಿಲ್ಲ. ಆದರೆ ಎಲ್ಲ ಸಾಲವನ್ನು ಮರುಪಾವತಿ ಮಾಡಿರುತ್ತಾರೆ. ದೀಪಕ ಇವರ ಹೇಳಿಕೆಯ ಪ್ರಕಾರ ಒಟ್ಟು ಕುಟುಂಬದ ಮೊತ್ತದಿಂದ ಸಾಲವನ್ನು ಮರುಪಾವತಿ ಮಡಲಾಗಿರುತ್ತದೆ ಎಂದರೆ ಸರಿಯಲ್ಲ. ಈ ರೀತಿ ಇರುವಾಗ ಸದರಿ ಆಸ್ತಿ ನನ್ನ ತಂದೆಗೆ ಮಾತ್ರ ಸಂಬಂಧಿಸಿದ್ದು, ಒಟ್ಟು ಕುಟುಂಬದ ಆಸ್ತಿಗೆ ಸಂಬಂಧಿಸಿದ್ದು ಇರುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಸುಭಾಶ ರಸ್ತೆಯಲ್ಲಿರುವ ಜಿ.ಕೆ.ಮೆಹತಾ ಅಂಗಡಿ 40 ವರ್ಷದಿಂದ ಬಾಡಿಗೆಗೆ ಇದೆ ಎಂದರೆ ಸಾಕ್ಷಿದಾರರು ಬಹಳ ವರ್ಷಗಳಿಂದ ಬಾಡಿಗೆಗೆ ಇದ್ದಾರೆ, 40 ಎಂದು ಖಚಿತವಾಗಿ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಸದರಿ ಬಾಡಿಗೆ ವ್ಯವಹಾರ ಎಲ್ಲವೂ ನನ್ನ ತಂದೆ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಸದರಿ ಮೆಹತಾ ಅಂಗಡಿಯವರು ದಿಃ01-10-2004 ರಂದು ಚೆಕ್ ನಂ.563645 ರ ಮೂಲಕ 8 ಲಕ್ಷ ರೂಪಾಯಿಗಳನ್ನು ಜಗದೀಶ ರೇಗೆ ಇವರಿಗೆ ಮುಂಗಡ ಬಾಡಿಗೆಯಾಗಿ ಮತ್ತು 7 ಲಕ್ಷ ರೂಪಾಯಿ

ಭದ್ರತಾ ಠೇವಣಿ ಎಂದು ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಈ ರೀತಿ 15 ಲಕ್ಷ ರೂಪಾಯಿಗಳು ಜಗದೀಶ ಇವರ ಹೆಸರಿನಲ್ಲಿರುವ ಕೆನರಾ ಬ್ಯಾಂಕನ ಮುಖ್ಯ ಶಾಖೆಯ ಖಾತೆಗೆ ಜಮೆ ಆಗಿರುತ್ತದೆ ಎಂದರೆ ಸುಳ್ಳು. ಈ ರೀತಿ ಕೆನರಾ ಬ್ಯಾಂಕನ ಪಾಸಪುಸ್ತಕ ಹಾಜರುಪಡಿಸಿದರೆ ಸದರಿ ಎಂಟ್ರಿಯ ವಿಷಯ ಸಂಗತಿ ಗೊತ್ತಾಗುತ್ತದೆ ಎಂದು ಉದ್ದೇಶಪೂರ್ವಕವಾಗಿ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಸದರಿ ಮೊತ್ತವನ್ನು ಉಪಯೋಗಿಸಿಕೊಂಡು ಬೆಳಗಾವಿ ರಸ್ತೆಯಲ್ಲಿರುವ ಮನೆ ಖರೀದಿ ಸಲುವಾಗಿ ಪಡೆದುಕೊಂಡು ಸಾಲವನ್ನು ತೀರಿಸಿರುತ್ತಾರೆ ಎಂದರೆ ಸರಿಯಲ್ಲ.

ನಿ.ಡಿ.21 ರಂತೆ ಇರುವ ಐಸಿಐಸಿಐ ಬ್ಯಾಂಕ ದಾಖಲೆಯನ್ನು ಯಾವ ಕಾರಣಕ್ಕೆ ಸಲ್ಲಿಸಿದ್ದಿರಾ ಎಂಬ ಪ್ರಶ್ನೆಗೆ ಸಾಕ್ಷಿದಾರರು ನನ್ನ ಖಾತೆಯ ಮುಖಾಂತರ ಸದರಿ ಸಾಲವನ್ನು ತೀರಿಸಿರುವ ಕುರಿತು ಇರುವ ಪೂರಕ ದಾಖಲೆ ಎಂದು ಉತ್ತರಿಸುತ್ತಾರೆ. ನಾನು 2012 ನೇ ಇಸ್ವಿಯಲ್ಲಿ ಬೆಂಗಳೂರಿನ ಟೋಯೋಟಾ ಕೀರ್ಲೋಸ್ಕರ ಪ್ರೈ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದು, ನನಗೆ 50 ಸಾವಿರ ರೂಪಾಯಿಗಳ ಮಾಸಿಕ ಸಂಬಳವಿತ್ತು. ಈ ರೀತಿ ಇರುವಾಗ ನನ್ನ ತಂದೆಗೆ ಎಷ್ಟು ಮೊತ್ತವನ್ನು ನೀಡಿದ್ದಿರಾ ಎಂಬ ಪ್ರಶ್ನೆಗೆ ಸಾಕ್ಷಿದಾರರು ನೋಡಿ ಹೇಳಬಹುದು ಎಂದು ಉತ್ತರಿಸುತ್ತಾರೆ. 2012 ನೇ ಇಸ್ವಿಯಲ್ಲಿ ನಾನು ಮತ್ತು ನನ್ನ ಅಣ್ಣ ಕೂಡಿ ಬೆಂಗಳೂರಿನಲ್ಲಿರುತ್ತಿದ್ದೇವು. ಬೆಂಗಳೂರಿನ ಜೀವನ ವಿಧಾನದ ಪ್ರಕಾರ ನನಗೆ ಬರುವಂತ 50 ಸಾವಿರ ರೂಪಾಯಿಗಳು ನನಗೆ ಸಾಲುತ್ತಿರಲಿಲ್ಲ ಎಂದರೆ ಸರಿಯಲ್ಲ. ಆದ್ದರಿಂದ ನನ್ನ ತಂದೆಗೆ ಸಾಲವನ್ನು ತೀರಿಸಲು ಹಣವನ್ನು ವರ್ಗಾಯಿಸಿರುವ ಕುರಿತು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಜಗದೀಶರವರು ಒಟ್ಟು ಕುಟುಂಬದ ಉತ್ಪನವನ್ನು ನನಗೆ ಕೊಟ್ಟಿದ್ದು, ಅದನ್ನು ನನ್ನ ಬ್ಯಾಂಕ ಖಾತೆಯ ಮುಖಾಂತರ ಪುನಃ ಅವರಿಗೆ ವರ್ಗಾಯಿಸಿದ್ದು ಇರುತ್ತದೆ ಎಂದರೆ ಸುಳ್ಳು. ನಾನು ವರ್ಗಾಯಿಸಿದ್ದೆ ಎಂದು ಹೇಳಲಾದ ಮೊತ್ತ ನನ್ನ ತಂದೆಯ ಸಾಲದ ಖಾತೆಗೆ ಜಮೆ ಆಗಿಲ್ಲ ಎಂದರೆ ಸರಿಯಲ್ಲ. ನಾನು ವರ್ಗಾಯಿಸಿದ ಮೊತ್ತವನ್ನು ಸಾಲದ ಖಾತೆಗೆ ಜಮೆ ಮಾಡಿರುವ ಕುರಿತು ಯಾವ ದಾಖಲೆ ಇದೆ ಎಂಬ ಪ್ರಶ್ನೆಗೆ ಸಾಕ್ಷಿದಾರರು ನನ್ನ ಖಾತೆ ಮತ್ತು ನನ್ನ ತಂದೆಯ ಖಾತೆಯನ್ನು ಹೊಂದಾಣಿಕೆ ಮಾಡಿ ನೋಡಬೇಕಾಗುತ್ತದೆ, ಸದ್ಯಕ್ಕೆ ನನಗೆ ಹೇಳಲು ಆಗುವುದಿಲ್ಲ ಎಂದು ಉತ್ತರಿಸುತ್ತಾರೆ.

ನನ್ನ ಪ್ರಮಾಣಪತ್ರದ 5 ನೇ ಖಂಡಿಕೆಯಲ್ಲಿ ಸಾಲದ ಸಂಬಂಧ ಅರವಿಂದ ರೇಗೆ ಇವರನ್ನು ಸೇರ್ಪಡೆ ಮಾಡಿಕೊಂಡಿರುವ ಕುರಿತು ಇರುವ ವಿಷಯ ಸಂಗತಿ ಸುಳ್ಳು ಇದೆ ಎಂದರೆ ಸರಿಯಲ್ಲ. ಸಾಕ್ಷಿದಾರರು ಮುಂದುವರೆದು ಸಾಲದ ಖಾತೆಯ ಮರುಪಾವತಿಯ ಬ್ಯಾಂಕನ ಪ್ರಕರಣದಲ್ಲಿ ಸದರಿ ಅರವಿಂದ ರೇಗೆ ಇವರು ಆ ಆಸ್ತಿಗೆ ಮತ್ತು ನನಗೆ ಸಂಬಂಧವಿಲ್ಲ ಎಂದು ಹೇಳಿರುತ್ತಾರೆ. ಈ ರೀತಿ ಹೇಳಿಕೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ಪ್ರಮಾಣಪತ್ರದ 8 ನೇ ಖಂಡಿಕೆಯಲ್ಲಿ 2006 ನೇ ಇಸ್ವಿಯ ಮುಂಚಿತವಾಗಿ ಬರುವ ಎಲ್ಲ ಬಾಡಿಗೆ ಹಣವನ್ನು ವಾಸುದೇವ ರೇಗೆ ಇವರು ಪಡೆಯುತ್ತಿರುವ ಕುರಿತು ಇರುವ ವಿಷಯ ಸಂಗತಿ ಸುಳ್ಳು ಇರುತ್ತದೆ ಎಂದರೆ ಸರಿಯಲ್ಲ. ನನ್ನ ತಂದೆ ದಾವೆಯಲ್ಲಿರುವ ವಾದಿಗಳಿಗೆ ಮತ್ತು ಅವರ ವಾರಸುದಾರರಾದ ಪ್ರತಿವಾದಿಗಳಿಗೆ ಎಲ್ಲರಿಗೂ ಮೋಸ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನ್ಯಾಯಾಲಯದ ಆದೇಶದ ಪ್ರಕಾರ ಬಾಡಿಗೆ ಹಣದ ಸಂಗ್ರಹದ ವಿಷಯದಲ್ಲೂ ಸಹ ಇದೇ ರೀತಿ ಮೋಸ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಪ್ರೀತಂ ರೇಗೆ ಇವರ ಮಾತು ಕೇಳಿಕೊಂಡು ನ್ಯಾಯಾಲಯದಲ್ಲಿ ಸುಳ್ಳು ಪ್ರಮಾಣಪತ್ರದೊಂದಿಗೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

***ಪಾಟೀ ಸವಾಲು : ಶ್ರೀ ವಿಪಿಐ ವಕೀಲರು ಶ್ರೀ ಎಸಿಸಿ ವಕೀಲರ ಪರವಾಗಿ ಮೇಲಿನ ಪಾಟೀ ಸವಾಲು ಅಳವಡಿಸಿಕೊಳ್ಳಲು ವಿನಂತಿಸಿರುತ್ತಾರೆ.***

***ಮರು ವಿಚಾರಣೆ : ಇಲ್ಲ.***

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

1 ನೇ ಹೆ ಹಿ ದಿ ನ್ಯಾ ಹಾಗೂ ಸಿಜೆಎಂ,

ಧಾರವಾಡ.